# ಬ್ರೂನೋ



ಜೀವನದಲ್ಲಿ ಸುವಾಸನೆಯೇ ಇಲ್ಲವೆನಿಸಿದೆ. ದೈನಿಕದ ಏಕತಾನತೆಯಿಂದ ಜಡ್ಡುಗಟ್ಟಿದ್ದೇನೆಯೇ? ಬೆಂಗಳೂರಿನ ಯಾಂತ್ರಿಕ ಬದುಕಿನಿಂದ ನಾನೇ ಕಳೆದುಹೋಗಿದ್ದೇನೆಯೇ? ಏನಾಗಿದೆ ನನಗೆ? ಇವತ್ತು ಆಫೀಸಿನಿಂದ ಮನೆಗೆ ಹೊರಡುವ ಈ ಮುಸ್ಸಂಜೆಯ ಹೊತ್ತಿನಲ್ಲಿ ಈ ಗಿಲ್ಟ್ ಕಾಡತೊಡಗಿತು. ನನ್ನನ್ನು ಈ ಸಮಾಜ ಗುರುತಿಸುವುದು ಕಥೆಗಾರನೆಂಬ ಹಣೆಪಟ್ಟಿಯಿಂದ. ಆದರೆ ಇಷ್ಟು ವರ್ಷಗಳಲ್ಲಿ ಸೃಜನಶೀಲವಾದ ಏನನ್ನಾದರೂ ಬರೆದಿದ್ದೇನೆಯೇ? ಅಥವಾ ನನ್ನನ್ನು ಘಾತಿಸುವ ಯಾವ ಸಂಗತಿಯೂ ಬರೆಯಲು ಪ್ರೇರೇಪಿಸಿಲ್ಲವಾ? ಅಥವಾ ನಾನೇ ವಿಮುಖನಾದೆನಾ? ಈ ಎಲ್ಲಾ ಗೊಂದಲಗಳು ಕಾಡಿದ್ದು ಇವತ್ತೇ!

ನನ್ನ ಅಸ್ತಿತ್ವವಿರುವುದೇ ನನ್ನ ಕಥೆಗಳಿಂದ. ಸಾಹಿತ್ಯ ಸಾಂಗತ್ಯದಿಂದ. ಇದಿಲ್ಲದೆ ಹೋದರೆ ನನ್ನ ಬದುಕಿಗೇನು ಅರ್ಥ. ಈ ರಂಕಲು ಹಲ್ಲಂಡೆಗಳಿಂದ ಮೈ ಕೊಡವಿಕೊಂಡು ಕುಳಿತು ಬರೆಯಬೇಕು. ನನ್ನನ್ನು ಕಾಡಿದ ನೂರಾರು ಸಂಗತಿಗಳನ್ನು ಕಥೆಯಾಗಿಸಬೇಕು. ನನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಬೇಕು ಅಂತೆಲ್ಲಾ ಮುದಗೊಳ್ಳುತ್ತಾ ಮನೆ ತಲುಪಿದಾಗ ರಾತ್ರಿ ಎಂಟಾಗಿತ್ತು.

ಮನೆಯ ಗೇಟ್ ತೆರೆದು ನನ್ನ ಪ್ರೀತಿಯ ವೆಸ್ಪಾ ಗಾಡಿಯನ್ನು ನಿಲ್ಲಿಸಿ ಉಸ್ಸಪ್ಪಾ... ಎಂದು ರಿಲ್ಯಾಕ್ಸ್ ಆಗುವಷ್ಟರಲ್ಲಿ ಮನೆಯ ಒಳಗೆ ಏನೋ ಸಂತಸದ ಕಲರವ. ಯಾರೋ ಅತಿಥಿಗಳು ಬಂದಿರಬಹುದೇ ಎಂದುಕೊಂಡು ಒಳಗೆ ಕಾಲಿಡುವಷ್ಟರಲ್ಲಿ ನನ್ನ ಮುದ್ದು ಮಗಳು ವರ್ಷ ಹರ್ಷದಿಂದ ಓಡೋಡಿ ಬಂದಳು. ಏನು ಪುಟ್ಟ ಇಷ್ಟೊಂದು ಖುಷಿಯಾಗಿರುವೆ ಎಂದು ಅವಳ ಕೆನ್ನೆ ಹಿಂಡುವಷ್ಟರಲ್ಲಿ 'ಅಪ್ಪಾ ನೋಡಲ್ಲಿ' ಎಂದಳು. ನಾನು ಅತ್ತಿತ್ತ ನೋಡಿ 'ಏನು ಪುಟ್ಟ' ಎಂದೆ. ಆಗವಳು 'ಬಾಗಿಲ ಹಿಂದೆ ನೋಡಪ್ಪಾ' ಎಂದಳು. ನಾನು ಕಣ್ಣು ಪಿಳುಕಿಸುತ್ತಾ ಬಾಗಿಲ ಕೆಳಗೆ ನೋಡಿದೆ. ಬೆಳ್ಳನೆಯ ಮೊಲದಾಕಾರದ ಮುದ್ದಾದ ನಾಯಿಮರಿ! 'ಇದೇನು ಪುಟ್ಟ, ಇದನ್ನು ಎಲ್ಲಿಂದ ತಂದೆ? ಎಷ್ಟು ಮುದ್ದಾಗಿದೆ' ಎಂದೆ. 'ಇವತ್ತು ಮಧ್ಯಾಹ್ನ ಮಳೆಯಲ್ಲಿ ತೋಯುತ್ತಾ ನಮ್ಮ ಮನೆಯ ಗೇಟ್‌ನ ಬಳಿ ಬಂದು ನಿಂತಿತ್ತು. ನಾನೇ ಒಳಗೆ ಕರೆತಂದೆ. ನಿನ್ನಿಂದ ಏನೂ ಅಬ್ಜೆಕ್ಷನ್ ಇಲ್ವಾ?' – ಮಗಳ ಆತಂಕ.

'ತುಂಬಾ ಕ್ಯೂಟ್ ಆಗಿದೆ ಅಪ್ಪಾ. ಲ್ಯಾಬ್ರಡಾರ್ ಡಾಗ್ ಥರಾ ಕಾಣಿಸುತ್ತಲ್ಲವಾ? ನನಗೆ ಕೆಲಸ ಸಿಗುವವರೆಗೂ ಸ್ವಲ್ಪ ದಿನ ನೋಡಿಕೊಳ್ತೀನಿ. ಅದು ದೊಡ್ಡದಾದ ಮೇಲೆ ಬೇರೆ ಕಡೆ ಬಿಡೋಣ'. ಮಗಳ ಸಮಜಾಯಿಷಿಗೆ, ನಾನು ಅವಳ ತಲೆ ಸವರಿ ಹೇಳಿದೆ – 'ಚೆನ್ನಾಗಿ ನೋಡಿಕೋ'. ಮಗಳು ಕುಣಿದಾಡಿಬಿಟ್ಟಳು.

ಚಿಕ್ಕವಳಿದ್ದಾಗ ಹೀಗೆಯೇ ಯಾರೋ ನೆಂಟರ ಮನೆಗೆ ಹೋದಾಗ ಆ ಮನೆಯ ಮುದ್ದಾದ ಗೋಲ್ಡನ್ ರಿಟ್ರೀವರ್ ವಿದೇಶಿ ನಾಯಿಯನ್ನು ಕಂಡು ಮಗಳು ಕುಣಿದಾಡಿದ್ದಳು. ಇಂತಹುದೇ ನಾಯಿಯನ್ನು ನಾವೂ ಸಾಕಬೇಕು ಎಂದು ಸಂಭ್ರಮಿಸಿದ್ದಳು. ನಾನು ಗದರಿಸಿದ್ದೆ. 'ನಾಯಿ ಸಾಕೋದು ತುಂಬಾ ಕಷ್ಟ' ಎಂದು ಸುಮ್ಮನಾಗಿಸಿದ್ದೆ. ಮಗಳೂ ಆಗೀಗ ಫ್ರೆಂಡ್ಸ್ ಮನೆಯ ಪೊಮೇರಿಯನ್, ಜರ್ಮನ್ ಶೆಫರ್ಡ್, ಶಿಡ್ಝೂ, ರಾಟ್ ವೀಲರ್ಸ್ ನಾಯಿಗಳ ಪೋಟೊಗಳನ್ನು ನನ್ನ ವಾಟ್ಸಾಪ್‌ಗೆ ಹಾಕಿ ತನ್ನಲ್ಲಿರುವ ನಾಯಿಪ್ರೀತಿಯನ್ನು ತೋರುತ್ತಿದ್ದಳು. ನಾನು ನೋಡಿಯೂ ಸುಮ್ಮನಿರುತ್ತಿದ್ದೆ. ನನ್ನ ಒಬ್ಬಳೇ ಮಗಳ ಕಿಂಚಿತ್ ಆಸೆಯನ್ನು ಪೂರೈಸಲಿಕ್ಕಾಗಿ, ಅವಳ ಎಜುಕೇಷನ್ ಮುಗಿದ ನಂತರ ಒಂದು ಒಳ್ಳೆಯ ಜಾತಿಯ ನಾಯಿಯನ್ನು ಕೊಡಿಸಲು ಒಳಗೊಳಗೇ ನಿಶ್ಚಯಿಸಿದ್ದೆ.

ಇದೀಗತಾನೇ ಮಗಳು ಬಿ.ಇ. ಪದವೀಧರೆಯಾಗಿ ಉದ್ಯೋಗದ ನಿರೀಕ್ಷೆಯಲ್ಲಿದ್ದಳು. ಬೆಂಗಳೂರಿನಲ್ಲಿ ಒಳ್ಳೆಯ ಸಾಫ್ಟ್‌ವೇರ್ ಕಂಪನಿಗಳಲ್ಲಿ ಒಳ್ಳೆಯ ಉದ್ಯೋಗ ಸಿಕ್ಕದಿದ್ದರೆ ಎಂ.ಎಸ್. ಓದಿಗಾಗಿ



■ ವೈ.ಬಿ.ಎಚ್. ಜಯದೇವ್